ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ
ನ್ಯಾಯಾಲಯ,ಮಂಡ್ಯ,(ಆಸೀನ ಶ್ರೀರಂಗಪಟ್ಟಣ)

ಸತ್ರ ಪ್ರಕರಣ ಸಂಖ್ಯೆಃ 5048/2022

ಪ್ರಾ ಸಾ 20 ಚಾ ಸಾ 33

ಹೆಸರುಃ ಅಕ್ಷಯ್

ತಂದೆಯ ಹೆಸರುಃ ನಾರಾಯಣ

ವಯಸ್ಸುಃ 26 ವರ್ಷ

ಉದ್ಯೋಗಃ ಫ್ಯಾಕ್ಟರಿಯಲ್ಲಿ ಕೆಲಸ

ವಾಸಃ ಕೆ ಆರ್ ಎಸ್ ,ಸಂತೆಮಾಳ .

ದಿಃ 12.06.2024 ರಂದು ಸಾಕ್ಷಿಯನ್ನು ಕರೆಸಿ
ಪ್ರಮಾಣ ವಚನ ಬೋಧಿಸಲಾಯ್ತು.

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-

1. ಸುಮಾರು ಎರಡು ವರುಷದ ಹಿಂದೆ ಕೆ ಆರ್ ಸಾಗರದ ಬಜಾರ್ ಲೈನ್ ನಲ್ಲಿ ಗಂಗಾರಾಮುವಿನ ಹೆಂಡತಿ ಲಕ್ಷ್ಮಿ , ಆಕೆಯ ಮೂರು ಜನ ಮಕ್ಕಳು ಮತ್ತು ಇನ್ನೊಬ್ಬ ಹುಡುಗ ಗೋವಿಂದನನ್ನು ಕೊಲೆ ಮಾಡಲಾಗಿತ್ತು , ವಿಚಾರ ತಿಳಿದ ನಾನು ಮೈಸೂರಿನ ಕೆ ಆರ್ ಆಸ್ಪತ್ರೆಗೆ ಹೋಗಿ ಅಲ್ಲಿದ್ದ ರಾಜುವಿನ ಶವವನ್ನು ನೋಡಿದ್ದೇನೆ.

2. ನಾನು ನೋಡಿದಾಗ ರಾಜುವಿನ ತಲೆಯ ಹಿಂಭಾಗದಲ್ಲಿ ಮತ್ತು ಹಣೆಯ ಭಾಗದಲ್ಲಿ ತೀವ್ರತರವಾದ ಗಾಯಗಳಿದ್ದವು.

3. ನಾನು ನೋಡಿದಾಗ ಆ ಮಗುವನ್ನು ಸುತ್ತಿಗೆಯಿಂದ ಮತ್ತು ಮಚ್ಚಿನಿಂದ ತಲೆಯ ಹಿಂಭಾಗಕ್ಕೆ ಹೊಡೆದು ಸಾಯಿಸಿರಬಹುದು ಅಭಿಪ್ರಾಯವನ್ನು ವ್ಯಕ್ತ ಪಡಿಸಿ ನಾನು ನನ್ನ ಹೇಳಿಕೆಯನ್ನು ಕೊಟ್ಟಿರುತ್ತೇನೆ ಮತ್ತು ಆ ಸಂದರ್ಭದಲ್ಲಿ ಪೊಲೀಸರು ನಿಪಿ 31 ರಂತೆ ಪಂಚನಾಮೆ ಮಾಡಿ ನಿಪಿ32 ರಂತೆ ಮೂರು ಪೋಟೋಗಳನ್ನು ತೆಗೆದಿರುತ್ತಾರೆ .

<u>ಪಾಟೀ ಸವಾಲುಃ ಆರೋಪಿಗಳ ಪರವಾಗಿಃ ಶ್ರೀಎಸ್ಆರ್ ಎಸ್ ವಕೀಲರಿಂದಃ</u>

4. ಸುತ್ತಿಗೆ ಮತ್ತು ಮಚ್ಚಿನಿಂದ ರಾಜುವಿನ ತಲೆಗೆ ಹೊಡೆದು ಸಾಯಿಸಿದ್ದಾರೆ ಎಂದು ನಿಪಿ 31 ರ ಲ್ಲಿ ಕಂಡುಬರುವ ನನ್ನ ಹೇಳಿಕೆಯಲ್ಲಿ ತಿಳಿಸಿಲ್ಲ. ಪೊಲೀಸರು ಏನು ಬರೆದುಕೊಂಡಿದ್ದಾರೆ ಎಂದು ನಾನು ಅವರಿಂದ ಕೇಳಿ ತಿಳಿದುಕೊಂಡಿಲ್ಲ.

ಮರು ವಿಚಾರಣೆ ಃ ಇಲ್ಲ .

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯ್ತು.

ಓ ಹೇ ಕೇ ಸರಿ ಇದೆ.

ಮೂರನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ (ಆಸೀನ ಶ್ರೀರಂಗಪಟ್ಟಣ)